ನನಗೆ ಕೆಲಸವಿಲ್ಲವೇ? ನನ್ನ ಹೆಂಡತಿಯನ್ನು ಕರೆದುಕೊಂಡು ಹೋಗಲು ಅಪ್ಪ ಅಮ್ಮ ಯಾಕೆ ಬರಬೇಕು?' ಎಂದ ಅವರ ಮಾತಿನಲ್ಲಿ ಸಿಟ್ಟಿತ್ತಂತೆ.

'ಅಪ್ಪ ಅಮ್ಮ ಯಾಕೆ ಬೇಕು ಹೇಳಿದರೆ ಅವರು ಹಿರಿಯರು. ನಿಮ್ಮ ನಡುವೆ ಏನು ಮಾತುಕತೆಯಾಗಿದೆ ಅದನ್ನಾದರೂ ಹೇಳಿದರೆ ನಮಗೆ ಗೊತ್ತಾದೀತು. ಅವರೇ ಬರಲಿ ಮಾತಾಡಿ ಆಮೇಲೆ ಕಳಿಸುವ' ಎಂದರಂತೆ.

'ನಾನೇನು ಸಣ್ಣ ಮಗುವೇ?' ಅವರು ಕೊಟ್ಟ ಆಸರಿಗೆಯನ್ನೂ ಮುಟ್ಟದೆ ತಟ್ಟನೆ ಎದ್ದು ಗೊಣಗಿಕೊಂಡು ಹೋದರಂತೆ.

ಅವನು ಹೋದ ಮೇಲೆ ಹೊರಗೆ ಬಂದ ಹಂಸಿನಿ, 'ನಾನು ಇಲ್ಲಿರುವುದು ನಿಮಗೆ ಇಷ್ಟವಿಲ್ಲವಲ್ಲವೇ? ನಾನು ಎಲ್ಲಾದರೂ ಹೋಗಿ ಸಾಯ್ತೇನೆ. ಇನ್ನೊಬ್ಬರಿಗೆ ಭಾರವಾಗಿ ನಾನು ಇರುವುದಿಲ್ಲ. ನನಗೆ ಒಂದು ಮಾತು ಹೇಳದೆ ನೀವು ಅವರನ್ನು ಕರೆಸಿದಿರಲ್ಲಾ?' ಎಂದು ತನ್ನ ಸಿಟ್ಟು ಸೆಡವು ಅಸಹಾಯಕತೆಯನ್ನೆಲ್ಲಾ ಏಕಕಾಲಕ್ಕೆ ಹೊರಗೆ ಹಾಕಿ ಅತ್ತಳಂತೆ. ಅಮ್ಮ ಅವಳನ್ನು ಸಮಾಧಾನ ಮಾಡುವಲ್ಲಿ ಹೈರಾಣಾಗಿ ಹೋದರಂತೆ. ತಾವು ಅವರನ್ನು ಕರೆಸಿಲ್ಲವೆಂದು ಅವಳಿಗೆ ಅರ್ಥಮಾಡಲು ಸೋತು ಹೋದರಂತೆ.

ಹಂಸಿನಿಯ ವರ್ತನೆ ನನಗೆ ಬೇಸರ ಮೂಡಿಸಿತು. ಒಂದು ದಿನ ನಾವೆಲ್ಲಾ ಸಂಜೆ ಹೊತ್ತು ಹಾಲ್‌ನಲ್ಲಿ ಕುಳಿತು ಮಾತಾಡುತ್ತಿರುವಾಗ ನಾನೇ ವಿಷಯವನ್ನು ತೆಗೆದೆ, 'ಹಂಸಿನಿ, ನಿನ್ನ ಮುಖದಲ್ಲಿ ನಗುವೇ ಮಾಯವಾಗಿದೆ. ಎಷ್ಟು ಲವಲವಿಕೆಯಿಂದ ಇದ್ದವಳು. ಪುಸ್ತಕಗಳನ್ನು ಓದ್ತಾ ಇದ್ದೆ, ಎಂಬ್ರಾಡರಿಂಗ್ ಮಾಡ್ತಿದ್ದೆ, ಬಟ್ಟೆ ಹೊಲಿತ್ತಿದ್ದೆ. ಈಗ... ಹೀಗೆ ದುಃಖಿಸ್ತಾ ಇದ್ರೆ ಹೇಗೆ? ಅಲ್ಲಿ ಏನಾಯ್ತೂಂತ ಹೇಳಿದ್ರಾದ್ರೂ...' ನನ್ನ ಮಾತು ಮುಗಿದಿರಲಿಲ್ಲ.

'ಗೊತ್ತು ನನಗೆ. ನಾನು ಇಲ್ಲಿರುವುದು ನಿಮಗೆ ಇಷ್ಟವಿಲ್ಲ. ಹೋಗ್ತೀನಿ. ನಾಳೆ ಬೆಳಗ್ಗೆವರೆಗೆ ಇಲ್ಲಿರುವುದಕ್ಕೆ ಅವಕಾಶ ಕೊಡಿ' ಎಂದು ಅಳುತ್ತಾ ಕೋಣೆ ಸೇರಿಕೊಂಡಳು. ನಮಗೆಲ್ಲಾ ಅವಳು ಏನಾದರೂ ಮಾಡಿಕೊಂಡರೆ ಎನ್ನುವ ಭಯ. ಅಮ್ಮ ಅವಳ ಕೋಣೆಯ ಬಾಗಿಲನ್ನು ಬಡಿದರು. ಅವಳು ಉತ್ತರಿಸಲೇ ಇಲ್ಲ. ಅಪ್ಪನೂ ಕರೆದರು. ಬಾಗಿಲು ತೆರೆಯಲಿಲ್ಲ. ನಾನೂ ಹೋದೆ.

'ಹಂಸಿನಿ, ಸಾರಿ, ನನ್ನ ಕ್ಷಮಿಸು. ಇನ್ನು ಮುಂದೆ ನಾವೇನೂ ನಿನ್ನನ್ನು ಕೇಳೋದಿಲ್ಲ. ಬಾಗಿಲು ತೆರಿ ಮಾರಾಯ್ತಿ. ಹೊರಗೆ ಬಾ' ಎಂದು ಕರೆದೆ. ಅವಳಿಗೆ ಏನನಿಸಿತೋ, ತತ್‌ಕ್ಷಣ ಬಾಗಿಲು ತೆರೆದು ಹೊರಗೆ ಬಂದಳು. ಅತ್ತು ಅತ್ತು ಅವಳ ಕಣ್ಣುಗಳು ಊದಿಕೊಂಡಿದ್ದವು. ಏನೂ ಮಾತಾಡದೆ ನೇರವಾಗಿ ಹೋಗಿ ಸೋಫಾದಲ್ಲಿ ಕುಳಿತಳು. ನಮ್ಮ ಆತಂಕ ಕಡಿಮೆಯಾಯಿತು. ಈಗ ಅಪ್ಪ ಅಮ್ಮನ ಮುಖದಲ್ಲಿಯೂ ನೋವಿನ ಎಳೆಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಒಂದು ಪರಿಹಾರವೇ ಇಲ್ಲದ ಸಮಸ್ಯೆಯೇ ಹಂಸಿನಿಯದ್ದು? ನಾನೂ ಆಲೋಚಿಸಿ ಆಲೋಚಿಸಿ ಸೋತು ಹೋದೆ. ಅಲ್ಲಿ ನಡೆದದ್ದೇನು ಅನ್ನುವುದು



ಗೊತ್ತಾದರೆ ಏನಾದರೊಂದು ಪರಿಹಾರವನ್ನು ಮಾಡಬಹುದಿತ್ತು. ಸಮಸ್ಯೆಯೇನೆನ್ನುವುದೇ ಗೊತ್ತಿಲ್ಲ. ಇನ್ನು ಪರಿಹಾರದ ಮಾತೆಲ್ಲಿ? ಆವತ್ತೇ ಕೊನೆ, ಆಮೇಲೆ ನಾವ್ಯಾರು ಅವಳಾಗಿಯೇ ಹೇಳಿಯಾಳೆಂಬ ಭರವಸೆಯಿಂದ ವಿಷಯವನ್ನು ಕೇಳಲು ಹೋಗಿಲ್ಲ.

ಮುಗಿಲುಗಳು ಸಾಗುತ್ತಿದ್ದವು. ಒಂದು ದಿನ ಸಾಗುತ್ತಿದ್ದ ಮುಗಿಲುಗಳೆಲ್ಲಾ ನಿಂತು ಬಿಟ್ಟವು. ಅರೆಕ್ಷಣದಲ್ಲಿಯೇ ಗುಡುಗು ಮಳೆಯ ಆರ್ಭಟ ಶುರುವಾಯಿತು.

'ನೀವೀವಾಗ ಮಾತಾಡಿದ್ದು ಯಾರ ವಿಷಯ?' ತಟ್ಟನೆ ಕೋಣೆಯಿಂದ ಹೊರಗೆ ಬಂದ ಹಂಸಿನಿಯ ಪ್ರಶ್ನೆಗೆ ಅಮ್ಮನೆ ಬೆಚ್ಚಿ ಬಿದ್ದರು. ಅವರು ಮಾತಾಡಿಕೊಂಡಿದ್ದದ್ದು ಪ್ರದ್ಯುಮ್ನನ ವಿಷಯ. ಅದನ್ನು ಕೇಳಿಸಿಕೊಂಡು ಇವಳೇಕೆ ಇಷ್ಟೊಂದು ಉದ್ವೇಗಕ್ಕೊಳಗಾಗಬೇಕು. ತತ್‌ಕ್ಷಣವೆ ಅವಳ ಸಮಸ್ಯೆಗೆ ಕಾರಣ ತಿಳಿಯಿತು.

'ನಾವು ಮಾತಾಡಿಕೊಂಡಿದ್ದು ಶಾಂತಕ್ಕನ ಮಗ ಪ್ರದ್ಯುಮ್ನನ ವಿಷಯ. ಅವನು ಇರೋದು ಸಿಂಗಾಪುರದಲ್ಲಿ. ಇಲ್ಲಿ ಮನೆಯಲ್ಲಿ ನೋಡಿದ್ರೆ ಈ ತರ ಕಥೆ' ಎಂದು ನಾನು ಅವಳ ಉದ್ವೇಗವನ್ನು ಕಡಿಮೆ ಮಾಡುವಂತೆ ಶಾಂತ ಸ್ವರದಲ್ಲಿ ಹೇಳಿದೆ. ಅವಳ ಮುಖದ ಬಿಗಿ ಕಡಿಮೆಯಾಯಿತು. ಕಣ್ಣುಗಳಲ್ಲಿ ತುಂಬಿದ ಹನಿಯನ್ನು ಒರೆಸಿಕೊಂಡು ಒಳಗೆ ಹೋದಳು.

ಅಮ್ಮ ಅವಸರಿಸಿ ನನ್ನನ್ನು ಹೊರಗೆ ಕರೆದುಕೊಂಡು ಬಂದಳು.

'ಅಲ್ವೋ ಮಾರಾಯಾ, ಇವಳದ್ದೂ ಇದೇ ಕಥೆಯೋ ಹೇಗೆ ಮಾರಾಯಾ?' ಅಮ್ಮನ ಮುಖದಲ್ಲಿ ಇಲ್ಲಿಯವರೆಗೂ ಇರದ ಆತಂಕವೊಂದು ಮೂಡಿತು. ಇರಬಹುದೇನೋ ಎನ್ನುವಂತೆ ನಿಟ್ಟುಸಿರಿಟ್ಟೆ.

ಶಾಂತಕ್ಕನ ಮಗ ಪ್ರದ್ಯುಮ್ನ ಸಾಧು ಸ್ವಭಾವದ ಹುಡುಗ. ತನ್ನ ಓದು ಬಿಟ್ಟರೆ ಬೇರೇನೂ ತಿಳಿಯದ ಹಸುವಿನಂತ ಮನುಷ್ಯ. ಓದು ಮುಗಿಯಿತು. ಐಟಿ ಕಂಪನಿಯಲ್ಲಿ ಒಳ್ಳೆಯ ಉದ್ಯೋಗವೂ ಸಿಕ್ಕಿತು. ಆರೇಳು ತಿಂಗಳಲ್ಲಿಯೇ ವಿದೇಶಕ್ಕೆ ಹಾರಿ ಹೋಗಿದ್ದ. ಶಾಂತಕ್ಕನ ಖುಷಿಗೆ ಪಾರವೇ ಇರಲಿಲ್ಲ. ಮಗ ವಿದೇಶಕ್ಕೆ ಹಾರಿದ್ದೆ, ಮಗನಿಗೆ ಮದುವೆ ಮಾಡುವ ಯೋಚನೆಗೆ ಬಿದ್ದರು. ಪ್ರದ್ಯುಮ್ನನ ಬಗ್ಗೆ ಸಂಬಂಧಿಕರಿಗೆಲ್ಲರಿಗೂ ಒಳ್ಳೆಯ ಅಭಿಪ್ರಾಯವಿತ್ತು. ಸಂಬಂಧ ಕುದುರುವುದೇನು ಕಷ್ಟವಾಗಲಿಲ್ಲ. ಅಂತು ಅವನು ಎರಡು ವರ್ಷ ವಿದೇಶದಲ್ಲಿದ್ದು ಊರಿಗೆ ರಜೆಗೆ ಬಂದವನಿಗೆ ಮದುವೆಯನ್ನು ಮಾಡಿ ಮುಗಿಸಿದರು. ಅವನು ಅಲ್ಲಿ ಇವಳು ಇಲ್ಲಿ ಅನ್ನುವಂತಹ ವಾತಾವರಣ ನಿರ್ಮಾಣವಾಯಿತು. ಅಂತು ಇಂತು ಶಾಂತಕ್ಕನ ಒತ್ತಾಯಕ್ಕೆ ಅವನು ಹೆಂಡತಿಯನ್ನು ಕರೆದುಕೊಂಡು ಹೋದ. ಅವರಿಬ್ಬರೂ ಒಟ್ಟಿಗೆ ಇದ್ದದ್ದು ಎರಡು ತಿಂಗಳು ಮಾತ್ರ. ವಿದೇಶದಿಂದಲೇ ಸೊಸೆ ತವರು ಮನೆ ಸೇರಿಯಾಯಿತು. ಕಾರಣ ಯಾರಿಗೂ ಗೊತ್ತಿಲ್ಲ. ಆದರೆ ಮೊನ್ನೆ ಯಾರೋ ಹೇಳಿದ ಸುದ್ದಿ: ಪ್ರದ್ಯುಮ್ನ ಮದುವೆಗೆ ಮೊದಲೇ ತನ್ನ ಸಹೋದ್ಯೋಗಿಯನ್ನೇ ಇಟ್ಟುಕೊಂಡು ಸಂಸಾರ ನಡೆಸ್ತಿದ್ದನಂತೆ. ಇಲ್ಲಿ ಮನೆಯವರಿಗೂ ವಿಷಯ ತಿಳಿಸಿಲ್ಲ. ಅಮ್ಮನ ಮನಸ್ಸಿಗೆ ನೋವಾಗಬಾರದೆಂದು ಅಮ್ಮನ ಒತ್ತಾಯಕ್ಕೆ ಮದುವೆಯಾದದ್ದಂತೆ. ಈಗ ಆ ಹುಡುಗಿಯ ಕಥೆ!

'ಆ ಹುಡುಗಿಯ ಕಥೆ ನನಗೆ ಗೊತ್ತಿಲ್ಲ. ಅಷ್ಟೇ ಆಗಿದ್ದರೆ ಸಹಿಸಿಕೊಳ್ಳಬಹುದಿತ್ತು. ಅದಕ್ಕಿಂತಲೂ ವಿಕೃತವಾದ ಮನಸ್ಸಿನವನ ಜೊತೆಗೆ ಸಂಸಾರ ನಡೆಸುವುದು ಹೇಗೆ?' – ಅವಳು ತಟ್ಟನೆ ನಮ್ಮ ಮಾತಿನ ಮಧ್ಯೆ ಬಂದು ಮೊಬೈಲ್ ಹಿಡಿದು ತೋರಿಸಿದಳು. ನೀಲಿ ಚಿತ್ರಗಳು!

'ಅಯ್ಯಯ್ಯೋ' ಅಮ್ಮ ನೋಡಲೇ ಆಗದಂತೆ ಮುಖಮುಚ್ಚಿಕೊಂಡು ಅತ್ತಳು. ನಾನೂ ನೋಡಲಾರದೆ ಮುಖ ತಿರುಗಿಸಿದೆ.

'ಚಿತ್ರಗಳನ್ನು ನೋಡೋದಿಕ್ಕೆ ನಿಮಗೆ ಅಸಹ್ಯ ಆಗ್ತಿದೆ. ಇಂತಹ ವಿಕೃತವನ್ನೇ ನಾನು ದಿನಾ ಅನುಭವಿಸಿದ್ದೆ' ಎಂದು ಅವಳು ಅಳುತ್ತಾ ಒಳಗೆ ಓಡಿದಳು.

ಇಷ್ಟು ದಿನ ಹಂಸಿನಿಯ ಬಾಯಿ ಬಿಡಿಸುವಲ್ಲಿ ಸೋತ ಮನೆಯವರಿಗೆಲ್ಲಾ ಈಗ ಆದ ಅನುಭವವೇ ನಮ್ಮನ್ನು ಹಸಿ ಹಸಿಯಾಗಿ ಚುಚ್ಚಿತು.

ಹಂಸಿನಿ ತಾನಾಯಿತು ತನ್ನ ಪಾಡಾಯಿತು ಎನ್ನುವಂತೆ ಇದ್ದಳು. ನಾವ್ಯಾರೂ ಅವಳ ಮನಸ್ಸು ನೋಯಿಸಲು ಇಚ್ಛಿಸಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in